

# ಮೆದುಳಿನ ಅನ್ಯುರಿಸಂ; ಮಹಿಳೆಗೆ ಮರುಜನ್ಮ

‘ಮೆದುಳಿನ ಅನ್ಯುರಿಸಂ’ ಎಂಬ ಬಹು ಸಂಕೀರ್ಣ ಸಮಸ್ಯೆಯಿಂದ ಬಳಲುತ್ತಿದ್ದ 57 ವರ್ಷದ ಶೈಲಜಾ ಅವರಿಗೆ ಬೆಂಗಳೂರಿನ ಅಪೋಲೊ ಆಸ್ಪತ್ರೆ ವೈದ್ಯರು ಕ್ಲಿಷ್ಟಕರವಾದ ಶಸ್ತ್ರಚಿಕಿತ್ಸೆ ನಡೆಸಿ ಸಂಪೂರ್ಣ ಯಶಸ್ವಿಯಾಗಿದ್ದಾರೆ. ಇಂತಹ ಪ್ರಕರಣ ವಿಶ್ವದಲ್ಲೇ ಮೊದಲನೆಯದು ಎನ್ನಲಾಗಿದೆ.

■ ಉಮಾ ಅನಂತ್

ಐವತ್ತೇಳು ವರ್ಷದ ಶೈಲಜಾ ಬೆಂಗಳೂರಿನಲ್ಲಿ ಶಾಲೆಯೊಂದರ ಮೇಲ್ವಿಚಾರಕಿ. ಇವರಿಗೆ ‘ಮೆದುಳಿನ ಅನ್ಯುರಿಸಂ’ ಎಂಬ ಬಹು ಅಪರೂಪದ ಹಾಗೂ ಪ್ರಾಣಕ್ಕೆ ಅಪಾಯ ತಂದೊಡ್ಡುವ ರಕ್ತನಾಳದ ಸಮಸ್ಯೆ ಇತ್ತು. ಇವರ ಮೆದುಳಿಗೆ ರಕ್ತವನ್ನು ಸರಬರಾಜು ಮಾಡುವ ನಾಲ್ಕು ಪ್ರಮುಖ ರಕ್ತನಾಳಗಳ ಪೈಕಿ ಎರಡು ರಕ್ತನಾಳಗಳಲ್ಲಿ ಗುಳ್ಳೆ ಆಗಿ ಗ್ಲುಕೋಸ್ ಮತ್ತು ಆಮ್ಲಜನಕ ಸಂಚಾರದಲ್ಲಿ ತಡೆ ಉಂಟಾಗಿತ್ತು. ಇದರಿಂದ ರಕ್ತ ಸಂಚಾರಕ್ಕೆ ಬಹಳ ಕಷ್ಟವಾಗುತ್ತಿತ್ತು. ಈ ಸಮಸ್ಯೆ ಬರುವುದಕ್ಕೂ ಮುನ್ನ ಶೈಲಜಾ ಹೈಪರ್ ಟೆನ್ಶನ್ ಹಾಗೂ ಹೈಪರ್ ಥೈರಾಯ್ಡಿಸಂ ಸಮಸ್ಯೆಗಳಿಂದ ಬಳಲುತ್ತಿದ್ದರು. ಇದರಿಂದ ಶೈಲಜಾಗೆ ಪಾರ್ಶ್ವವಾಯು ಕಾಡಲಾರಂಭಿಸಿತು. ತಕ್ಷಣ ವೈದ್ಯರಲ್ಲಿಗೆ ಹೋಗಿ ತಪಾಸಣೆ ಮಾಡಿಸಿದಾಗ ವೈದ್ಯರು ಎಂಆರ್‌ಐ ಸ್ಕ್ಯಾನ್ ಮಾಡಿಸಲು ಸಲಹೆ ನೀಡಿದರು. ಅದರಂತೆ ಇವರಿಗೆ ‘ಬ್ರೈನ್ ಅನ್ಯುರಿಸಂ’ ಇದ್ದುದು ಸ್ಪಷ್ಟವಾಯಿತು.

ಇದಕ್ಕಾಗಿ ಇವರ ರಕ್ತನಾಳಕ್ಕೆ ಎರಡು ಫ್ಲೋ ಡೈವರ್ಟರ್ ಸ್ಟೆಂಟ್ ಅಳವಡಿಸಬೇಕಾಗಿತ್ತು. ಶೇಷಾದ್ರಿಪುರಂನಲ್ಲಿರುವ ಅಪೋಲೊ ಆಸ್ಪತ್ರೆಯಲ್ಲಿ ತಜ್ಞ ವೈದ್ಯರು ಶೈಲಜಾಗೆ ಶಸ್ತ್ರಚಿಕಿತ್ಸೆ ಮೂಲಕ ಬ್ಲಾಕ್ ಆಗಿದ್ದ ರಕ್ತನಾಳಗಳಿಗೆ ಸ್ಟೆಂಟ್ ಅಳವಡಿಸಿ ಈ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಿಸಿ ಯಶಸ್ವಿಯಾಗಿದ್ದಾರೆ. ಇಂಥ ಪ್ರಕರಣ ವಿಶ್ವದಲ್ಲೇ ಮೊದಲನೆಯದು ಎನ್ನಲಾಗಿದೆ.

‘ಬ್ರೈನ್ ಅನ್ಯುರಿಸಂ ಎಂಬುದು ಬಹಳ ಸಂಕೀರ್ಣ ಸಮಸ್ಯೆ. ಚಿಕಿತ್ಸೆಯಲ್ಲಿ ಕೊಂಚ ಎಡವಿದರೂ ರೋಗಿಯ ಜೀವಕ್ಕೇ ಅಪಾಯ. ತಾಳ್ಮೆ, ನಾಜೂಕು ಹಾಗೂ ವೈದ್ಯ ತಂತ್ರಜ್ಞಾನದಲ್ಲಿ ಪರಿಣತಿ ಸಾಧಿಸಿದರೆ ಮಾತ್ರ ಈ ಬಹು ಸಂಕೀರ್ಣ ಚಿಕಿತ್ಸೆ ನೀಡಲು ಸಾಧ್ಯ. ಸುಮಾರು ಐದು ಗಂಟೆಗಳ ಸತತ ಚಿಕಿತ್ಸೆಯಿಂದ ಶೈಲಜಾ ಅವರಿಗೆ ಸ್ಟೆಂಟ್ ಅಳವಡಿಸಿದೆವು. ಇದು ಸಂಪೂರ್ಣ ಯಶಸ್ವಿಯಾಗಿದ್ದು ಈಗ ಶೈಲಜಾ ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ಹೇಳುತ್ತಾರೆ ಇವರಿಗೆ ಚಿಕಿತ್ಸೆ ನೀಡಿದ ಶೇಷಾದ್ರಿಪುರ ಅಪೋಲೊ ಆಸ್ಪತ್ರೆಯ ನ್ಯೂರೊ ರೇಡಿಯಾಲಜಿಸ್ಟ್ ಡಾ. ಶರತ್ ಕುಮಾರ್ ಜಿ.ಜಿ.

‘ಮೆದುಳಿನ ಅನ್ಯುರಿಸಂ 1000 ಜನರಲ್ಲಿ ನಾಲ್ಕು ಜನಕ್ಕೆ ಆಗಬಹುದು. ಮಹಿಳೆಯರಲ್ಲಿ ರಕ್ತನಾಳಗಳು ಪುರುಷರಿಗಿಂತ ಹೆಚ್ಚು ದುರ್ಬಲವಾಗಿರುವುದರಿಂದ ಇವರಲ್ಲೇ ಈ ಸಮಸ್ಯೆ ಹೆಚ್ಚು. ಶೈಲಜಾ ಪ್ರಕರಣ ಇಡೀ ವಿಶ್ವದಲ್ಲೇ ಬಹಳ ಅಪರೂಪದ್ದು ಹಾಗೂ ಬಹಳ ಸವಾಲಿನದ್ದು ಆಗಿತ್ತು. ಇದು ನನ್ನ ವೃತ್ತಿ ಜೀವನದಲ್ಲಿಯೂ ಬಹಳ ಅಪರೂಪದ್ದು ಹಾಗೂ ನನಗೆ ಇದು ಸವಾಲಿನದ್ದೇ ಆಗಿತ್ತು’ ಎಂದು ಹೇಳುತ್ತಾರೆ ಈ ತಜ್ಞರು.

